ಅಧ್ಯಕ್ಷರು :— ಈ ವಿಷಯದಲ್ಲಿ ಸ್ಪಷ್ಟತೆ ಇರಬೇಕೆಂದು ನಮಗೆ ಸರ್ಕಾರದ ಉದ್ದೇಶ ಗೊತ್ತಾಗಬೇಕಿನ್ನುವ ದೃಷ್ಟಿಯಿಂದಲೇ ಅವಕಾಶ ಕೊಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :— ನಾನು ಇದನ್ನು ಸ್ವಾಗತಿಸುತ್ತೇನೆ. ಈಗಾಗಲೇ ಕನ್ನಡ ಮಾಧ್ಯಮ ಎಲ್ಲಿಯವರೆಗೆ ಇರಬೇಕೆಂದು ತೀರ್ಮಾನವಾಗಿದೆ. ಆ ತೀರ್ಮಾನದ ಬಗ್ಗೆ ನಿರ್ದಿಷ್ಟವಾದ ಒಂದು ನಿಲುವು ಇದೆ. ಹೊಸದಾಗಿ ಅವರು ಏನು ನಿಲುವು ತೆಗೆದುಕೊಳ್ಳಬೇಕಾಗಿಲ್ಲ. ತಮಗೆ ಗೊತ್ತಿದೆ, ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮಾನ್ಯ ಮುಖ್ಯ ಮಂತ್ರಿಗಳು ಉದ್ಘಾಟನೆ ಮಾಡಿದ್ದಾರೆ. ಎಸ್.ಎಸ್.ಎಲ್.ಸಿ.ಯವರೆಗೆ ಕನ್ನಡವನ್ನು ಕಡ್ಡಾಯವಾಗಿ ನೀಡಬೇಕೆಂದು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಸರ್ಕಾರದ ನೀತಿ ಏನು? ಆ ಅಧ್ಯಕ್ಷರ ಭಾಷಣ ಏನು? ಅದರ ವ್ಯವಸ್ಥೆ ಏನು?

ಕುಣಿಗಲ್ ಬಳಿ ಟ್ರಾಮ್ ಸೆಂಟರ್ ತೆರೆಯುವ ಬಗ್ಗೆ.

17(150) ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರ್ವಜನಿಕ ಆಸ್ಪತ್ರೆಯು ಹೆದ್ದಾರಿ 48 ರಲ್ಲಿ ಇದ್ದು ಈ ಪ್ರದೇಶದಲ್ಲಿ ಆಗುತ್ತಿರುವ ಅಪಘಾತಗಳ ಹಿನ್ನೆಲೆಯಲ್ಲಿ ಟ್ರಾಮ್ ಸೆಂಟರ್ ತೆರೆಯುವ ಆಲೋಚನೆ ಸರ್ಕಾರಕ್ಕಿದೆಯೇ?

ಆ) ಹಾಗಿದ್ದಲ್ಲಿ ಅದನ್ನು ಎಂದಿನಿಂದ ತೆರೆಯಲಾಗುವುದು?

ಡಾ : ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಇಲ್ಲಾ

ಆ) ಈಗಾಗಲೇ ನೆಲಮಂಗಲದಲ್ಲಿ ಅಪಘಾತ ಚಿಕಿತ್ಸಾ ಕೇಂದ್ರ (ಟ್ರಾಮಸೆಂಟರ್) ಕಾರ್ಯನಿರ್ವಹಿಸುತ್ತಿರುವುದರಿಂದ ಕುಣಿಗಲ್ ಹಾಗೂ ನೆಲಮಂಗಲಕ್ಕೆ 50 ಕಿ.ಮಿ. ಅಂತರವಿರುವುದರಿಂದ ಇನ್ನೊಂದು ಕೇಂದ್ರವನ್ನು ಪ್ರಾರಂಭಿಸುವ ಅವಶ್ಯಕತೆ ಬರುವುದಿಲ್ಲ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :— ಅಧ್ಯಕ್ಷರೆ, ಆ ಆಸ್ಪತ್ರೆ ಕುಣಿಗಲ್‌ನ ರಾಷ್ಟ್ರೀಯ ಹೆದ್ದಾರಿಯಲ್ಲಿ ಇದೆ. ಸಾರ್ವಜನಿಕರ ಆಸ್ಪತ್ರೆಯನ್ನು ಕೂಡ ತೆಗೆದಿರುತ್ತಾರೆ. ಇತ್ತೀಚೆಗೆ ಅಲ್ಲಿ ಬಹಳ ಅಪಘಾತಗಳು ಆಗುತ್ತವೆಂದು ಸರ್ಕಾರ ಒಪ್ಪಿಕೊಳ್ಳುತ್ತಿದೆ. ಅಲ್ಲಿ ಒಂದು ಟ್ರಾಮ ಸೆಂಟರ್ ತೆರೆಯಬೇಕೆಂದು ನಾನು ಅನೇಕ ಸಲ ಸಚಿವರಿಗೆ ಮನವಿಯನ್ನು ಮಾಡಿದ್ದೇನೆ. 50 ಕಿ.ಮೀ. ಅಂತರದ ನೆಲಮಂಗಲದಲ್ಲಿ ಇದೆ ಅದರ ಅವಶ್ಯಕತೆ ಇಲ್ಲವೆಂದು ಅವರು ಹೇಳುತ್ತಿದ್ದಾರೆ. ಟ್ರಾಮ್ ಸೆಂಟರ್ 50 ಕಿ.ಮೀ. ಒಳಗಡೆ ಇರಬೇಕೆಂದು ಸರ್ಕಾರದ ನಿಬಂಧನೆ ಏನಾದರೂ ಇದೆಯೇ? ಟ್ರಾಮ್ ಸೆಂಟರ್ ತೆಗೆಯುವ ಬಗ್ಗೆ ಸರ್ಕಾರ ಏನಾದರೂ ಒಂದು ಮಾರ್ಗಸೂಚಿಯನ್ನು ಹಾಕಿಕೊಂಡಿದೆಯೇ?

ಡಾ: ಎಂ. ಶಂಕರ ನಾಯ್ಕ (ವೈದ್ಯಕೀಯ ಶಿಕ್ಷಣ ಸಚಿವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ) :— ಮಾನ್ಯ ಅಧ್ಯಕ್ಷರೆ, ಸ್ಟೇಟ್ ಹೈವೇ ಹಾಗೂ ನ್ಯಾಶನಲ್ ಹೈವೇಯಲ್ಲಿ 44 ಟ್ರಾಮ ಸೆಂಟರ್‌ಗಳನ್ನು 50 ಕಿ.ಮೀ. ಒಳಗಡೆ ತೆರೆಯಬೇಕೆಂದು ಸರ್ಕಾರದ ತೀರ್ಮಾನವಾಗಿದೆ. ಈಗ ಅವರು ಹೇಳತಕ್ಕಂಥದ್ದು ಕುಣಿಗಲ್. ಈಗ ನೆಲಮಂಗಲ್ ಮತ್ತು ಚನ್ನರಾಯಪಟ್ಟಣದ ಹತ್ತಿರ ಏನು ಇದೆ ಅದನ್ನು ಕೈಬಿಟ್ಟಿದ್ದಾರೆ. 50 ಕಿ.ಮೀ. ಒಳಗಡೆ ಎರಡು ಬರುವುದರಿಂದ ಅದನ್ನು ಕೈಬಿಟ್ಟಿದ್ದಾರೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :— ಆದ 70 ಕಿ.ಮೀ. ಆಗುತ್ತದೆ. ನೆಲಮಂಗಲ ಕೂಡ 50 ಕಿ.ಮೀ. ದೂರವಾಗುತ್ತದೆ. ಈ ಮಧ್ಯೆ ಅಪಘಾತವಾದ ಗಾಯಾಳುಗಳನ್ನು ಸಾಗಿಸಲು ಏನಾದರೂ ಮಾಡಿ ಈ ಆಸ್ಪತ್ರೆಗೆ ಒಂದು ಆಂಬುಲೆನ್ಸ್ ಒದಗಿಸುವ ವ್ಯವಸ್ಥೆ ಮಾಡುತ್ತೀರಾ? ಇದರ ಬಗ್ಗೆ ಪುನಃ ಪರಿಶೀಲನೆ ಮಾಡಿ, ಸರ್ಕಾರಕ್ಕೆ ಒಂದು ಆಂಬುಲೆನ್ಸ್ ಒದಗಿಸುವುದಕ್ಕೆ ಏನು ಬರ್ಡನ್ ಆಗುವುದಿಲ್ಲ.

ಡಾ : ಎಂ. ಶಂಕರ್ ನಾಯಕ್ :— ಅಧ್ಯಕ್ಷರೆ, ಪ್ರತಿ ಟ್ರಾಮ ಸೆಂಟರ್‌ನಲ್ಲಿ 10 ಬೆಡ್‌ನ ಆಸ್ಪತ್ರೆ, ಒಂದು ಆಂಬುಲೆನ್ಸ್ ಒಂದು ವೈರ್‌ಲೆಸ್ ಒಂದು ಇಸಿಜಿ ಹಾಗೂ ಒಂದು ಎಕ್ಸರೇ ಎಲ್ಲಾ ಇರುತ್ತವೆ. ಅಪಘಾತವಾದ ತಕ್ಷಣ ಮಾಹಿತಿ ಕೊಟ್ಟರೆ ಆ ಆಂಬುಲೆನ್ಸ್ ಹೋಗುತ್ತದೆ. ಚನ್ನರಾಯಪಟ್ಟಣಕ್ಕೆ ಆ ಸೌಲಭ್ಯ ಇರುತ್ತದೆ.

ಅಧ್ಯಕ್ಷರು :— ಅವರು ಆ ಕಡೆ ಚನ್ನರಾಯಪಟ್ಟಣ ಈ ಕಡೆ ನೆಲಮಂಗಲ ಎರಡಕ್ಕೂ ಹತ್ತಿರ ಆಗುತ್ತದೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ನಮ್ಮ ಭಾಗದಲ್ಲಿ ಹೆಚ್ಚಿನ ಅಪಘಾತಗಳು ಆಗುತ್ತವೆ ಅಲ್ಲಿ ಟ್ರಾಮ ಸೆಂಟರ್ ಮಾಡದೇ ಹೋದರು ಪರವಾ ಇಲ್ಲ, ಅದಕ್ಕೆ ಬೇರೆ ಏನಾದರೂ ವ್ಯವಸ್ಥೆ ಮಾಡಬೇಕೆಂದು ಅವರು ಹೇಳುತ್ತಿದ್ದಾರೆ.

ಡಾ: ಎಂ. ಶಂಕರ್ ನಾಯಕ್ :— ಈಗಾಗಲೇ ಹೇಳಿರುವ ಪ್ರಕಾರ ಕುಣಿಗಲ್‌ಗೆ ಆಂಬುಲೆನ್ಸ್ ವ್ಯವಸ್ಥೆ ಮಾಡಲಾಗುತ್ತದೆ.

ಅಧ್ಯಕ್ಷರು :— ಆಂಬುಲೆನ್ಸ್ ಕೊಡುತ್ತೇವೆಂದು ಹೇಳಿದ್ದಾರೆ. ಮೊನ್ನೆ ನಾನೂ ಕೂಡ ಆ ಕ್ಷೇತ್ರಕ್ಕೆ ಹೋಗಿದ್ದೆ, ಹೆಬ್ಬೂರಿಗೆ ಒಂದು ಲೇಡಿ ಮೆಡಿಕಲ್ ಆಫೀಸರ್ ಪೋಸ್ಟ್ ಮಂಜೂರು ಮಾಡಬೇಕೆಂದು ಕೇಳಿದ್ದಾರೆ ಅದನ್ನು ನೀವು ಕೊಡಬೇಕಾಗುತ್ತದೆ.

ಡಾ: ಎಂ. ಶಂಕರ್ ನಾಯಕ್ :— ಇದರ ಬಗ್ಗೆ ಸಚಿವರ ಗಮನಕ್ಕೆ ತಂದು, ಅದರ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

<u>ಮೈಸೂರಿನ ತಿಲಕನಗರದಲ್ಲಿ ಹೈಟೆಕ್ ಆಸ್ಪತ್ರೆ ನಿರ್ಮಾಣ.</u>

18(406) ಶ್ರೀ ಮಾರುತಿರಾವ್ ಪವಾರ್ (ನರಸಿಂಹ ರಾಜ್) ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?